# ಚರ್ಮರೋಗಗಳಿಗೆ ಸಂಯೋಜಿತ ನರ್ಸಿಂಗ್

ರೋಗಿಗಳ ಶುಶ್ರೂಷೆಯಲ್ಲಿ ದಾದಿಯರ (Nurse) ಪಾತ್ರ ಹಿರಿದು. ಈ ಸೇವಾರಂಗದಲ್ಲಿ ಭಾರತೀಯರದ್ದೇ ಮೇಲುಗೈ ಎಂಬುದಕ್ಕೆ ಇತ್ತೀಚಿಗಿನ ದಶಕಗಳಲ್ಲಿ ವಿಶ್ವದೆಲ್ಲೆಡೆಗಳಲ್ಲಿನ ಆಸ್ಪತ್ರೆಗಳಲ್ಲಿ ಭಾರತೀಯ ಮೂಲದ ನರ್ಸ್‌ಗಳ ಇರುವಿಕೆ ಮತ್ತು ಬೇಡಿಕೆಯೇ ಸಾಕ್ಷಿ! ತಮ್ಮ ಅರಿವಿನ ಹರವನ್ನು ವಿಸ್ತರಿಸುವ ಅವಕಾಶಗಳಿಗಾಗಿ ಅವರು ವಿಶ್ವದ ಮುಂದುವರಿದ ರಾಷ್ಟ್ರಗಳನ್ನೊಳಗೊಂಡು, ನಾನಾ ರಾಷ್ಟ್ರಗಳಿಗೆ ವಲಸೆ ಹೋಗುತ್ತಿದ್ದಾರೆ. ಇದೊಂದು ಹೆಮ್ಮೆ ವಿಷಯವೇ ಆಗಿದ್ದರೂ, ಇವರ ಅರಿವು, ಸೇವೆಗಳ ಪೂರ್ತಿ ಪ್ರಯೋಜನವನ್ನು ನಮ್ಮ ದೇಶದಲ್ಲೇ ಚಿಕಿತ್ಸೆಯ ವಿವಿಧ ಆಯಾಮಗಳಲ್ಲಿ ನಾವು ಪಡೆಯುವಂತಾಗಿದ್ದೇವೆಯೇ? ಎಂದು ಕೇಳಿದರೆ ಉತ್ತರ ಇಲ್ಲ. ನಮ್ಮ ದೇಶದಲ್ಲಿ ಚರ್ಮ ಸಂಬಂಧಿ ರೋಗಗಳ ಚಿಕಿತ್ಸೆ, ಆರೈಕೆ ಮತ್ತು ಅದರಲ್ಲಿ ದಾದಿಯರ ಸೇವೆಯ ಪ್ರಾಮುಖ್ಯತೆಯ ಚಿಂತನೆ ಇನ್ನೂ ನಡೆದಿಲ್ಲ ಎನ್ನುವುದು ಸತ್ಯ! ನಮ್ಮ ದೇಶದ ಬಡಗ್ರಾಮೀಣ ಪ್ರದೇಶ ಮತ್ತು ನಗರಗಳಲ್ಲಿನ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಜನರಲ್ಲಿ ಬಹುತೇಕ ಸಂಖ್ಯೆಯವರು ಅನೇಕ ದೀರ್ಘಕಾಲದ ಚರ್ಮದ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಇಂತಹ ರೋಗಿಗಳಿಗೆ ಚರ್ಮರೋಗ ಚಿಕಿತ್ಸೆಯ ಬಗ್ಗೆ ಸರಿಯಾದ ಅರಿವಿಲ್ಲದಿರುವುದರಿಂದ ಮತ್ತು ಅವುಗಳಿಗೆ ಸರಕಾರ ಮತ್ತು ದೊಡ್ಡ ಆರೋಗ್ಯ ಸಂಸ್ಥೆಗಳ ನಿರ್ಲಕ್ಷ್ಯಗಳಿಂದಾಗಿ ಚರ್ಮರೋಗ ತಜ್ಞರ ಸೇವೆ ಇಂದಿಗೂ ಗಗನ ಕುಸುಮವಾಗಿಯೇ ಇದೇ! ಒಟ್ಟಾರೆ ಬಡತನ, ನಿರ್ಲಕ್ಷ್ಯಗಳಿಂದಾಗಿ ಭಾರತದಲ್ಲಿ ವಿವಿಧ ರೀತಿಯ ಚರ್ಮ ಸಂಬಂಧಿ ರೋಗಗಳ ಸಂಖ್ಯೆ ಹೆಚ್ಚುತ್ತಲೇ ಇದೆ. ಇತ್ತೀಚೆಗಿನ ಸಮೀಕ್ಷೆಯೊಂದರ ಪ್ರಕಾರ ನಮ್ಮ ದೇಶದಲ್ಲಿ 1000 ಮಿಲಿಯನ್ ಜನಸಂಖ್ಯೆಗೆ ಕೇವಲ 6000 ಚರ್ಮ ರೋಗ ತಜ್ಞರ ಮಾತ್ರವೇ ಇರುವುದಂತೆ! ಕರಾವಳಿಗೆ ಹೊಂದಿಕೊಂಡಿರು ರಾಜ್ಯಗಳ ಜನರನ್ನು ಮಾತ್ರ ಭಾದಿಸಲು ಸಾಧ್ಯವೆಂಬ ವಿಥ್ಯೆಯಲ್ಲಿದ್ದ ಆನೆಕಾಲು ರೋಗವು ಉತ್ತರ ಭಾರತ ಸೇರಿದಂತೆ ದೇಶದ 15ಕ್ಕೂ ಮಿಕ್ಕಿ ರಾಜ್ಯಗಳಲ್ಲಿ ಹರಡಿರುವುದು ಈಗ ಎಲ್ಲರ ಹುಬ್ಬೇರುವಂತೆ ಮಾಡಿದೆ. ಈಗ  ಭಾರತದಲ್ಲಿ 2.3 ಕೋಟಿಗೂ ಹೆಚ್ಚು ಆನೆಕಾಲು ರೋಗಿಗಳಿದ್ದಾರೆ. ಈ ರೋಗಿಗಳ ಚಿಕಿತ್ಸೆಯಲ್ಲಿ ರೋಗ ಭಾಧಿತ ಅಂಗಗಳ ಚರ್ಮದ ಆರೈಕೆಯೂ ಬಹಳ ಮುಖ್ಯ. ಈ ನಿಟ್ಟಿನಲ್ಲೂ ಚರ್ಮರೋಗ ಚಿಕಿತ್ಸೆಗೆ ಒತ್ತು ಕೊಡುವುದು ನಮ್ಮ ದೇಶದ ಆರೋಗ್ಯ ರಂಗದಲ್ಲಿನ ಮುಂದಿನ ದಿನಗಳಲ್ಲಿನ ಅಗತ್ಯಗಳಲ್ಲೊಂದು. ಆಸ್ಪತ್ರೆಗಳಲ್ಲಿ ಹೃದ್ರೋಗ ವಿಭಾಗ, ಅಪಘಾತ ವಿಭಾಗ, ಶಸ್ತ್ರ ಚಿಕಿತ್ಸಾ ವಿಭಾಗ, ಮಕ್ಕಳ ವಿಭಾಗ ಮುಂತಾದ ತುರ್ತು ಚಿಕಿತ್ಸಾ ವಿಭಾಗಗಳಲ್ಲಿ ಲಭಿಸುತ್ತಿರುವ ದಾದಿಯರ ಸೇವೆಯು ಕೆಲವೆಡೆಗಳಾದರೂ ಚರ್ಮರೋಗ ವಿಭಾಗದಲ್ಲೂ ಲಭಿಸುವಂತಾದರೆ ಅನೇಕ ದೀರ್ಘಕಾಲಿಕ ಚರ್ಮರೋಗಗಳಿಂದ ಜೀವನ ಪೂರ್ತಿ ನರಳುವ ರೋಗಿಗಳ ಆರೈಕೆ, ಚಿಕಿತ್ಸೆಗಳೂ ಈಗಿನದ್ದಕ್ಕಿಂತ ಪರಿಣಾಮಕಾರಿಯಾಗ ಬಹುದು. ಆದರೆ ಪಾಶ್ಚಾತ್ಯ, ಐರೋಪ್ಯ ರಾಷ್ಟ್ರಗಳಂತೆ ಚರ್ಮರೋಗ ವಿಭಾಗದಲ್ಲಿ ದಾದಿಯರ ಸೇವೆಯ ಪ್ರಾಮುಖ್ಯೆಯನ್ನು ಭಾರತದಲ್ಲಿನ್ನೂ ಮನಗಂಡಿಲ್ಲವೆಂಬುದೂ ಸತ್ಯ. ಮುಂದುವರಿದ ರಾಷ್ಟ್ರಗಳಲ್ಲಿ ಡರ್ಮಟೋಲಜಿ ನರ್ಸಿಂಗ್ ಎಂಬ ಸೇವೆಯು ತನ್ನ ಹರವನ್ನು ವಿಸ್ತರಿಸಿಕೊಳ್ಳುತ್ತಿದೆ. ಇದರ ಫಲವಾಗಿಯೇ ಅಲ್ಲಿ Consultant Nurse ಎಂದು ದಾದಿಯರ ಸಲಹಾ ಸೌಲಭ್ಯವೂ ಚರ್ಮ ಸಂಬಂಧಿ ರೋಗಿಗಳಿಗೆ ಲಭ್ಯವಾಗುತ್ತದೆ.

ಚರ್ಮರೋಗಗಳ ಚಿಕಿತ್ಸೆಯಲ್ಲಿ ದಾದಿಯರ ಸೇವೆಗೆ ಪ್ರಾಮುಖ್ಯತೆ ಕೊಟ್ಟು, ಭಾರತದ್ದಲೇ ಮೊದಲ ಬಾರಿಗೆ Integrative Skin Care Nursing (ಚರ್ಮರೋಗಗಳಿಗೆ ಸಂಯೋಜಿತ ನರ್ಸಿಂಗ್) ಎಂಬ ಹೊಸ ಅಧ್ಯಯನ ಕ್ರಮವೊಂದನ್ನು ಕಾಸರಗೋಡಿನ Institute of Applied Dermatology (IAD) ಯು ಇಂಗ್ಲೇಡಿನ International Skin care Nursing Group (ISNG) ಯ ಸಹಯೋಗದೊಂದಿಗೆ ರೂಪಿಸಿ ಅಭಿವೃದ್ಧಿ ಪಡಿಸಿದೆ.

ISNG ಯ ಪ್ರೊಫೆಸರ್ ಸ್ಟೀವನ್ ಎರ್ಸನ್ ರ ಪ್ರಕಾರ ಚರ್ಮ ಸಂಬಂಧಿ ಕಾಯಿಲೆಗಳ ಚಿಕಿತ್ಸೆ, ಆರೈಕೆ, ಶುಶ್ರೂಷೆಗಳ ಬಗ್ಗೆ ಕೇಂದ್ರೀಕರಿಸಿ ಅಧ್ಯಯನ ಕ್ರಮವನ್ನು ಅಭಿವೃದ್ಧಿ ಪಡಿಸಿ, ಅವುಗಳನ್ನು ಪ್ರತ್ಯೇಕ ಕಾಳಜಿ ವಹಿಸಿ, ದಾದಿಯರನ್ನು ತರಬೇತುಗೊಳಿಸಿದ್ದೇ ಆದಲ್ಲಿ ದೀರ್ಘಕಾಲದ ಚರ್ಮರೋಗಿಗಳ ಜೀವನ ಶೈಲಿಯನ್ನೇ ಸುಧಾರಿಸಬಹುದು. ಈ ಬಗ್ಗೆ ಅಧ್ಯಯನ ನಡೆಸಿ, ಭಾರತದಲ್ಲೂ ಇದರ ಪ್ರಾಮುಖ್ಯತೆಯನ್ನು ಮನಗಂಡು ಅಧ್ಯಯನ ಕ್ರಮವನ್ನು ಅಭಿವೃದ್ಧಿ ಪಡಿಸುತ್ತಿರುವ IAD ಯೊಂದಿಗೆ ISNG ಮತ್ತು ಅದರ ಮುಖ್ಯಸ್ಥ ಪ್ರೊ. ಸ್ವೀವನ್ ಎರ್ಸನ್ ಕೈಜೋಡಿಸಿರುವುದು ಹೆಮ್ಮೆಯೆ!

ಭಾರತದಲ್ಲಿ ಸುಮಾರು 106 ಪದ್ಧತಿಯ ಚಿಕಿತ್ಸಾ ವಿಧಾನಗಳಿವೆ. ಚರ್ಮದ ಆರೈಕೆ ಚಿಕಿತ್ಸೆಗಳ ಬಗ್ಗೆ ಈ ಎಲ್ಲಾ ಪದ್ಧತಿಗಳಲ್ಲೂ ಇವೆಯೆನ್ನುವುದೇ ಮನುಷ್ಯ ಚರ್ಮದ ಬಗ್ಗೆ ಎಷ್ಟೊಂದು ಕಾಳಜಿ ವಹಿಸಿದ್ದಾರೆಂಬುದಕ್ಕೆ ಸಾಕ್ಷಿ! ಅಲೋಪಥಿ ಡಾಕ್ಟರನ್ನು ಬೇಟಿಯಾಗುವ ಹೆಚ್ಚಿನ ಚರ್ಮರೋಗಿಗಳೂ ಆಯುರ್ವೇದ, ಮನೆ ಮದ್ದು ಸೇರಿದಂದೆ ಯಾವುದಾದರೊಂದು ಚಿಕಿತ್ಯಾ ಪದ್ಧತಿಯನ್ನು ಅಲೋಪಥಿ ಚಿಕಿತ್ಸೆಯೊಂದಿಗೆ ನಡೆಸುತ್ತಿರುವುದು ಸಾಮಾನ್ಯ. ಇವು ಅಲೋಪಥಿ ಚಿಕಿತ್ಸೆಯೊಂದಿಗೆ ಸಂಯೋಜಿಸಿದಾಗ ಗುಣಮುಖ ಹೊಂದುವ ಅವಧಿ ಮತ್ತು ಫಲಿತಾಂಶವೂ ಉತ್ತಮವಾಗಿರುತ್ತದೆ ಎನ್ನುತ್ತಾರೆ ಐ.ಎ.ಡಿ.ಯ ಮುಖ್ಯಸ್ಥರಾದ ಡಾ। ನರಹರಿ. ಆನೆಕಾಲು ರೋಗಕ್ಕೆ ಪ್ರಪ್ರಥಮ ಬಾರಿಗೆ ಸಂಯೋಜಿತ ಚಿಕಿತ್ಸಾ ವಿಧಾನವನ್ನು ಈ ಮೊದಲೇ ಆವಿಷ್ಕರಿಸಿ ಯಶಸ್ವಿಯಾಗಿರುವ ಐ.ಎ.ಡಿ.ಯು ಈ ರೋಗಿಗಳ ರೋಗಬಾಧಿತ ಅಂಗಗಳ ಚರ್ಮದ ಚಿಕಿತ್ಸೆಯನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದೆ. ಸಂಯೋಜಿತ ಪದ್ಧತಿಯಲ್ಲೇ ಈ ರೋಗಗಳ ಚರ್ಮದ ಆರೈಕೆಗಾಗಿ ಸಿದ್ಧ ಪಡಿಸಿರುವ ಚಿಕಿತ್ಸಾ ವಿಧಾನವನ್ನು ಲಂಡನ್ನಿನ Lymphoedema Frame Work  ಯನ್ನು ಶ್ಲಾಘಿಸಿದೆ. ಇದೇ ಅನುಭವದ ಆಧಾರದಲ್ಲಿ IAD ಯ ವೈದ್ಯರ ತಂಡವು ಇತರ ಚರ್ಮರೋಗಗಳಿಗೂ, ಆಧುನಿಕ ವೈದ್ಯಕೀಯ ಪದ್ಧತಿ, ಆಯುರ್ವೇದ, ಗೃಹೋಪಚಾರ ಮಾತ್ರವಲ್ಲದೇ ಇನ್ನಿತರ ಪದ್ಧತಿಗಳನ್ನು ಸಂಯೋಜಿಸಿ ಚಿಕಿತ್ಸಾ ಕ್ರಮವನ್ನು ಸಿದ್ಧಪಡಿಸಿ, ಚರ್ಮರೋಗಿಗಳ ಆರೈಕೆ ಮಾಡಬಹುದೆಂದು ಕಂಡುಕೊಂಡಿದೆ.

ಚರ್ಮರೋಗಿಗಳ ಚಿಕಿತ್ಸೆಗಾಗಿ ಐ.ಎ.ಡಿ.ಯು ಸಿದ್ಧ ಪಡಿಸಿರುವ ಈ ಅಧ್ಯಯನ ಕ್ರಮದಲ್ಲಿ ದಾದಿಯರ ಪಾತ್ರದ ವಿವಿಧ ಆಯಾಮಗಳನ್ನು ಕೂಲಂಕುಷವಾಗಿ ಕ್ರಮೀಕರಿಸಲಾಗಿದೆ. ಇಂಜೆಕ್ಷನ್, ಬ್ಯಾಂಡೇಜ್, ಕಂಪ್ರಶ್ಯನ್ ಮಾತ್ರವಲ್ಲವೇ ರೋಗಿಗಳೊಂದಿಗೆ ಆಪ್ತ ಸಮಾಲೋಚನೆ,ಔಷದ ಸೇವನೆಯ ಸರಿಯಾದ ವಿಧಾನಗಳ ತಿಳುವಳಿಕೆ ಮಾಡಿಕೊಡುವುದೂ ಸೇರಿ, ಹಲವಾರು ಹಂತಗಳ ತರಬೇತಿಯನ್ನು ದಾದಿಯರಿಗೆ ಕೊಡುವಂತಹ ರೀತಿಯ ಅಧ್ಯಯನ ಕ್ರಮವನ್ನು ದೇಶದಲ್ಲೇ ಮೊದಲ ಬಾರಿಗೆ ಇಲ್ಲಿ ISNG  ಯ ಸಹಯೋಗದೊಂದಿಗೆ ಅಭಿವೃದ್ಧಿ ಪಡಿಸಲಾಗುತ್ತಿದೆ ಅಲೋಪಥಿಯೊಂದಿಗೆ ಆಯುರ್ವೇದ, ಮತ್ತಿನ್ನಿತರ ಚರ್ಮರೋಗ ಚಿಕಿತ್ಸಾ ಪದ್ಧತಿಗಳನ್ನು ಇದರಲ್ಲಿ ಸಂಯೋಜಿಸಲ್ಪಟ್ಟದ್ದರಿಂದಲೇ ಈ ಯೋಜನೆಗೆ Integrative Skin care Nursing (ಚರ್ಮರೋಗಗಳಿಗೆ ಸಂಯೋಜಿತ ನರ್ಸಿಂಗ್) ಎಂದು ಹೆಸರಿಸಲಾಗಿದೆ.

ಇದೇ ನಿಟ್ಟಿನಲ್ಲಿ IAD ಯು ISNG  ಯ ಸಹಯೋಗದೊಂದಿಗೆ ಚರ್ಮರೋಗ ಚಿಕಿತ್ಸೆಗಾಗಿ ದಾದಿಯರನ್ನು ಸನ್ನದ್ಧಗೊಳಿಸಲಿರುವ ತರಬೇತಿಗಾಗಿ ಅಭಿವೃದ್ಧಿ ಪಡಿಸಿರುವ ಅಧ್ಯಯನ ಕ್ರಮದ ವಿವಿಧ ಆಯಾಮಗಳ ವಿಚಾರ ವಿನಿಮಯಗಳಿಗಾಗಿ ಮೂರು ದಿನಗಳ ಅಂತಾರಾಷ್ಟ್ರೀಯ ಕಮ್ಮಟವನ್ನು ಕಾಸರಗೋಡಿನ ....ನ ಮತ್ತು ಕೇರಳ ವ್ಯಾಪಾರಿ ವ್ಯವಸಾಯಿ ಏಕೋಪನ ಸಮಿತಿಯ ಹಾಲಿನಲ್ಲಿ ಇದೇ ನವಂಬರ್ 29,30 ಮತ್ತು ಡಿಸಂಬರ್ 1 ರಂದು ಆಯೋಜಿಸಿದೆ. ಓಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಚರ್ಮರೋಗ ವಿಭಾಗದ ಮಾಜಿ ಮುಖ್ಯಸ್ಥ ಪ್ರೊ. ಟೆರನ್ಸ್ ಜೆ. ರೆಯಾನ್, ISNGಯ ಡಾ। ಸ್ವೀವನ್ ಎರ್ಸನ್, ಪದ್ಮಶ್ರೀ ಪ್ರಶಸ್ತಿ ವಿಜೇತ, ಇಂದೋರಿನ ಕಸ್ತೂರ್ಬಾ ಟ್ರಸ್ಟ್‌ನ ಮಾಡಿ ನಿರ್ದೇಶಕ  ಟಿ.ಜಿ.ಕೆ.ಮೆನೋನ್ Kerala State Coucil for Science, Technology and Environment (KSCST&E) ನ ಡಾ। ಕಮಲಾಕ್ಷ ಕೊಕ್ಕಲ್, ಬೆಂಗಳೂರಿನ ಡಾ। ಪ್ರಕಾಶ್ ಮಾತ್ರವಲ್ಲದೇ ಕೇರಳ ಕೊಚ್ಚುತ್ರೇಸಿಯಾಮ್ಮ ಲಕ್ಷ್ಮನಾಯರ್ ಮುಂತಾದ ದೇಶಾದ್ಯಂತಹ 250ಕ್ಕೂ ಹೆಚ್ಚು ಹಿರಿಯ ನರ್ಸಿಂಗ್ ಪ್ರಾಧ್ಯಾಪಕರೂ, ನರ್ಸ್‌ಗಳೂ ಭಾಗವಹಿಸುವ ನಿರೀಕ್ಷೆ ಇದೆ. ಮೂರು ದಿನಗಳು ನಡೆಯುವ ವೈಜ್ಞಾನಿಕ ಅಧಿವೇಶನದಲ್ಲಿ ಹಲವು ತಜ್ಞರು ವಿಚಾರ ವಿನಿಮಯಗಳಲ್ಲಿ ಭಾಗವಹಿಸಲಿರುವುದು. ಮಾತ್ರವಲ್ಲವೇ ಆಯದ ದಾದಿಯರಿಗೆ ಇಲ್ಲಿ ತರಬೇತಿಯನ್ನೂ ನೀಡಲುದ್ದೇಶಿಸಲಾಗಿದೆ. ಭಾಗವಹಿಸಲು ಉದ್ದೇಶಿಸುವವರು ಹೆಚ್ಚಿನ ಮಾಹಿತಿಗಾಗಿ 04994–230116ನ್ನು ಸಂಪರ್ಕಿಸ ಬಹುದಾಗಿದೆ.

ಬ್ರಿಜೇಶ್ ಕಾಸರಗೋಡು